<u>ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಕುಂದಗೋಳ</u>

<u>ಸಿ.ಸಿ. ನಂ. **5/2021** ಸಿ. ಡಬ್ಲ್ಯೂಃ **6** ಪಿ ಡಬ್ಲ್ಯೂ ಃ **6**</u>

ಸಾಕ್ಷಿಯ ಹೆಸರು ಃ ಮಂಜುಳಾ ಯಲಿವಾಳ

ಗಂಡನ ಹೆಸರು ಃ ಮಂಜುನಾಥ

ವಯಸ್ಸು ಃ 32 ವರ್ಷ

ಉದ್ಯೋಗ ಃ ಗೃಹಿಣಿ.

ವಾಸಸ್ಥಳ ಃ ತೆಲಗಿ. ತಾಃ ಹರಪನಹಳ್ಳಿ, ಜಿಲ್ಲಾ ಃ ವಿಜಯನಗರ.

ದಿನಾಂಕಃ 26/10/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಸ ಸ ಅ ರವರಿಂದ</u>

1. ಚಾಸಾ 5 ಅವರ ಪರಿಚಯ ಇಲ್ಲ. ಚಾಸಾ 7 ನನ್ನ ತಂದೆ. ಈ ಪ್ರಕರಣದ ಆರೋಪಿ ಪರಿಚಯವಿಲ್ಲ. ಈ ಕೇಸಿನ ವಿಚಾರ ನನಗೆ ಗೊತ್ತಿಲ್ಲ. ಚಾಸಾ 1 ಪೋಲೀಸರಿಗೆ ದೂರು ಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

<u>**(**ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದ ಕಾರಣ ಸ ಸ ಅ ಅವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ನೀಡಿಲಾಯಿತು**.)**</u>

2. ನನ್ನ ಹಾಗೂ ನನ್ನ ತಂದೆಯ ಹೆಸರಿನಲ್ಲಿ ಕೆ ವಿ ಜಿ ಬ್ಯಾಂಕನಲ್ಲಿ ಉಳಿತಾಯ ಖಾತೆ ಇದ್ದು ನಾನು ದ್ವಿತಿಯ ಪಿ ಯು ಸಿ ಕಲಿತಿದ್ದು ಇಂಗ್ಲೀಷನಲ್ಲಿ M Y Yaliwal ಅಂತಾ ಸಹಿ ಮಾಡುತ್ತೇನೆ. ಬ್ಯಾಂಕಿನ ಉಳಿತಾಯ ನಂಬರ 17040557447 ಇದ್ದು ಬ್ಯಾಂಕಿನ ವ್ಯವಹಾರವನ್ನು ನನ್ನ ತಂದೆ ಹೆಚ್ಚಾಗಿ ಮಾಡುತ್ತಾರೆ. ಬೆಳೆ ಸಾಲ ಬೇಕಾದಾಗ ನಾನು ಸಾಲ ಬೇಡಿಕೆ ಅರ್ಜಿ ಇನ್ನುಳಿದ ದಾಖಲೆಗಳಿಗೆ ಸಹಿ ಮಾಡಿ ನನ್ನ ತಂದೆಗೆ ಕೊಟ್ಟ ನಂತರ ನಂತರ ನನ್ನ ತಂದೆಯವರು ಸಾಲದ ಹಣ ಮಂಜೂರಾಗಿದೆ ಅಂತಾ ಹೇಳಿ ಕರೆದುಕೊಂಡು ಹೋಗಿ ಬ್ಯಾಂಕಿನಿಂದ ಹಣ ಪಡೆಯುವ ಸ್ಲೀಪ್ ನಲ್ಲಿ ಸಹಿ ಮಾಡಿ ನಂತರ ಹಣ ಪಡೆದು ನನ್ನ ತಂದೆಗೆ ಕೊಟ್ಟು ನನಗೆ ಬರುತ್ತಿದ್ದ ಸಾಲ ತೀರಿಸುವಾಗಲೂ ಸಹ ನನ್ನ ತಂದೆಯವರು ನನ್ನನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ಹಣ ಜಮಾ ಮಾಡುವ ಸ್ಲೀಪ್ನನಲ್ಲಿ ಸಹಿ ಮಾಡಿಸಿ ಅವರೇ ಹಣವನ್ನು ತುಂಬುತ್ತಿದ್ದರು.

3. ಆರೋಪಿ 8-9 ವರ್ಷಗಳ ಹಿಂದೆ ನಮ್ಮ ಊರ ಕೆ ವಿ ಜಿ ಬ್ಯಾಂಕಿನಲ್ಲಿ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದು ನಂತರ ಬೇರೆ ಊರಿಗೆ ವರ್ಗಾವಣೆ ಆಗಿ ಹೋಗಿರುತ್ತಾರೆ. ದಿಃ 28/01/2013 ರಂದು ರೂ. 1,40,000/- ಸಾಲ ಪಡೆದ ಬಗ್ಗೆ ಬ್ಯಾಂಕಿನ ಹಣ ಪಡೆಯುವ ಸ್ಲೀಪನಲ್ಲಿದ್ದ ಸಹಿಗಳು ನನ್ನದಾಗಿದ್ದು ಸುಮಾರು ಎರಡು ವರ್ಷಗಳ ಹಿಂದೆ ಬ್ಯಾಂಕ ಮಾನೇಜರ ಹಣಕಾಸಿನ ಅವ್ಯವಹಾರವಾಗಿದೆ ಅಂತಾ

ಬ್ಯಾಂಕಿನ ಮೇಲಾಧಿಕಾರಿಗಳು ಬಂದು ನನಗೆ ಮತ್ತು ಚಾಸಾ 7 ಅವರಿಗೆ ಕರೆದು ಕೇಳಿದ್ದರು ಎಂದರೆ ಸರಿಯಲ್ಲ. ನಾವು ರೂ. 1,80,000/- ಸ್ಲೀಪನಲ್ಲಿದ್ದ ಪ್ರಕಾರ ಮಾನೇಜರ ಅವರು ಬೆಳೆ ಸಾಲದ ಹಣವನ್ನು ಕೊಟ್ಟಿಲ್ಲ. ರೂ. 1,60,000/- ಮಾತ್ರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯನ್ನು ವಿಚಾರಿಸಿದಾಗ ಬ್ಯಾಂಕಿನ ಸ್ಲೀಪನಲ್ಲಿ ರೂ. 20,000/- ನಾವು ಸ್ವಂತಕ್ಕೆ ಪಡೆದಿದ್ದಾಗಿ ಒಪ್ಪಿಕೊಂಡಿದ್ದು ಸದರಿ ಹಣವನ್ನು ಅಸಲು ಹಾಗೂ ಬಡ್ಡಿ ಸೇರಿಸಿ ಬ್ಯಾಂಕಿನಲ್ಲಿ ತುಂಬುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. ಆರೋಪಿ ರೂ. 26,440/- ಹಣವನ್ನು ದಿಃ 10/06/2015 ರಂದು ಬೆಳೆ ಖಾತೆ ಸಂಖ್ಯೆ 89023340031 ಗೆ ಜಮಾ ಮಾಡುವುದಾಗಿ ಗೊತ್ತಾಯಿತು ಎಂದರೆ ಸರಿಯಲ್ಲ. ಉಳಿದ ರೂ. 2,10,520/- ದಿಃ 08/06/2015 ರಂದು ಚಾಸಾ 7 ಬ್ಯಾಂಕಿಗೆ ಜಮಾ ಮಾಡಿರುತ್ತಾರೆ ನನ್ನ ಸಾಲದ ಖಾತೆ ಪೂರ್ಣ ಚುಕ್ತಾ ಆಗಿದ್ದು ಬೆಳೆ ಸಾಲ ಮಂಜೂರು ಮಾಡುವ ಬಗ್ಗೆ ಕೊಟ್ಟ ಅರ್ಜಿ, ಕರಾರು ಪತ್ರ ಹಾಗೂ ಇತರ ದಾಖಲೆಗಳು ಇರುವುದಿಲ್ಲ. ಆರೋಪಿ ತಾವು ದುರುಪಯೋಗ ಪಡಿಸಿಕೊಂಡ ಹಣದ ವಿಚಾರ ಗೊತ್ತಾಗಬಾರದೆಂದು ನಾಶ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಸುಳ್ಳು ಲೆಕ್ಕ ಪತ್ರ ಬರೆದು ಖೊಟ್ಟಿ ದಾಖಲೆ ತಯಾರಿಸಿ ನಮಗೆ ಗೊತ್ತಾಗದಂತೆ ರೂ. 20,000/- ಹಣವನ್ನು ನನ್ನ ಹೆಸರಿಗೆ ಮೇಲೆ ಖರ್ಚು ಹಾಕಿ ಆ ಹಣವನ್ನು ಸ್ವಂತಕ್ಕೆ ಪಡೆದು ದುರುಪಯೋಗ ಮಾಡಿಕೊಂಡು ಮತ್ತು ಬ್ಯಾಂಕಿಗೆ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದು ನಿಪಿ. 2 ರಂತೆ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಇಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.